ನಂಬಂಧಿಸಿದಂತೆ ಸಮಿತಿಗಳನ್ನು ರಚಿಸಿದ್ದು, ಈ ಉಪ ಸಮಿತಿಗಳು ನಂದರ್ಶನ ಪ್ರಕ್ರಿಯೆ ಪ್ರಾರಂಭಿಸಿದ್ದು, ಅರ್ಹ ಕಲಾವಿದರ ಪಟ್ಟಿಯನ್ನು ನೀಡಿದ ಕೂಡಲೇ ಮಾಸಾಶನವನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು

ಈ) ದಿನಾಂಕ 1 4 2004 ರಿಂದ ಮಾಸಾಶನ ಮಂಜೂರಾಗಿರುವುದಿಲ್ಲ ಆಯ್ಕೆ ಸಮಿತಿಯನ್ನು ರಚಿಸಿದ್ದು, ಆಯ್ಕೆ ಪ್ರಕ್ರಿಯೆ ಆರಂಭವಾಗಿರುತ್ತದೆ

ಉ) ಅ ಹೌದು ಅನರ್ಹ ಕಲಾವಿದರೆಂದು ತಿಳಿದು ಬಂದಂತಹವರ ಬಗ್ಗೆ ವಿಚಾರಣೆನಡೆಸಿ ಅವರಿಗೆ ಮಾಸಾಶನವನ್ನು ರದ್ದುಪಡಿಸಲಾಗಿದೆ

ಊ) ಅನರ್ಹ ಕಲಾವಿದರೆಂದು ತನಿಖೆಯಿಂದ ದೃಢಪಡುವಂತ ಹಾಸನ ಜಿಲ್ಲೆಗೆಸಂಬಂಧಿಸಿದಂತೆ ನಾಲ್ಕು ಜನರಿಗೆ (4) ಹಾಗೂ ಬಿಜಾಪುರ ಜಿಲ್ಲೆಯ ಒಬ್ಬರಿಗೆ (1) ಮಾಸಾಶನ ಮಂಜೂರಾತಿ ಸೌಲಭ್ಯ ರದ್ದುಪಡಿನಲಾಗಿದೆ

438 **ಶ್ರೀ ಸಿದ್ದು ಸಾವದಿ (ಜಮಖಂಡಿ)** ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ, ರಬಕವಿ, ಬನಹಟ್ಟಿ ಮತ್ತು ತೇರದಾಳ ನಗರ ಸಭೆಗಳ ನೀರು ವಿತರಣಾ ವೈಪುಗಳ ಜೋಡಣೆ ಗಳನ್ನು ಯಾವಾಗ ಮಾಡಲಾಗಿದೆ, (ವಾರ್ಡ್‌ವಾರು ವಿವರ ಒದಗಿಸುವುದು),

ಆ) ಈ ವಿತರಣಾ ಜಾಲದಲ್ಲಿ ಅನೇಕ ಕಡೆಗಳಲ್ಲಿ ವೈಪುಗಳು ವದೆ ವದೆ ಒಡೆದು ನೀರು ಪೋಲಾಗುವುದಲ್ಲದೇ ಮತ್ತು ಇನ್ನೂ ಅನೇಕ ವಾರ್ಡ್ ಗಳ ಬಹುತೇಕ ಭಾಗಗಳಲ್ಲಿ ವಿತರಣಾ ಜಾಲವೇ ಇಲ್ಲದಿರುವುದರಿಂದ ನಾರ್ವಜನಿಕರಿಗೆ ತೊಂದರೆಗಳಾಗುತ್ತಿರುವುದು ನಿಜವಲ್ಲವೆ,

ಇ) ಈ ಮೂರು ನಗರಗಳಲ್ಲಿ ವಿತರಣಾ ವೈಪುಗಳನ್ನು ಯಾವಾಗ ಅಳವಡಿಸಿ ಜನರಿಗೆ ನೀರು ಕೊಡಲಾಗುವುದು,

ಈ) ಜಮಖಂಡಿ ನಗರದ ಕುಡಿಯುವ ನೀರಿನ ಯೋಜನೆಯ ಕಾಮಗಾರಿ ಎಂದಿನಿಂದ ಪ್ರಾರಂಭಿಸಲಾಗಿದೆ ಹಾಗೂ ಗುತ್ತಿಗೆದಾರನ ಟೆಂಡರ್ ಅವಧಿ ಎಂದಿಗೆ ಮುಗಿದಿದೆ ಮತ್ತು ಯಾವಾಗ ಕೆಲಸವನ್ನು ಮುಗಿಸಿ ನೀರು ಕೊಡಲಾಗುವುದು, ಹಾಗೂ ಗುತ್ತಿಗೆದಾರನ ಟೆಂಡರ್ ಅವಧಿ ಎಂದಿಗೆ ಮುಗಿದಿದೆ ಮತ್ತು ಯಾವಾಗ ಕೆಲಸವನ್ನು ಮುಗಿಸಿ ನೀರು ಕೊಡಲಾಗುವುದು,

ಊ) ಅವಧಿ ಮುಗಿದು ವರ್ಷವಾದರೂ ಕೆಲಸ ಮುಗಿಸದೇ ಇರುವ ಗುತ್ತಿಗೆದಾರನ ಮೇಲೆ ಏನು ಕ್ರಮ ಜರುಗಿಸಿದ್ದೀರಿ,

ಊ) ಬೇಸಿಗೆಯಲ್ಲಿ ತೀವ್ರ ಕುಡಿಯುವ ನೀರಿನ ತೊಂದರೆ ಆಗುವುದನ್ನು ತಪ್ಪಿಸಲು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಜಮಖಂಡಿ 1977–78ರಿಂದ 1979–80 ರವರೆಗೆ ರಬಕವಿ ಬನಹಟ್ಟಿ 1996–97 ರಿಂದ 1999–2000 ತೇರದಾಳ–1995–96 ರಲ್ಲಿ ನೀರು ವಿತರಣಾ ವೈಮಗಳ ಜೋಡಣೆಯನ್ನು ಮಾಡಲಾಗಿದೆ (ವಾರ್ಡ್‌ವಾರು ವಿವರ ಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ)

ಆ) ಹೌದು

ಇ) ರಬಕವಿ ಬನಹಟ್ಟಿ ಮತ್ತು ತೇರದಾಳ ಪಟ್ಟಣಗಳಲ್ಲಿ ವಿತರಣಾ ವ್ಯವಸ್ಥೆಯನ್ನು ಅಳವಡಿಸಲಾಗಿದೆ

ಈ) ದಿನಾಂಕ 2 12 2003ರಂದು ಪ್ರಾರಂಭಿಸಲಾಗಿದೆ ಗುತ್ತಿಗೆದಾರರ ಟೆಂಡರ್ ಅವಧಿಯು ದಿನಾಂಕ 1 10 2005ರಂದು ಪೂರ್ಣಗೊಂಡಿರುತ್ತದೆ

ಕಾಮಗಾರಿಯನ್ನು ಅಕ್ಟೋಬರ್ 2007 ರೊಳಗೆ ಪೂರ್ಣಗೊಳಿಸಲಾಗುವುದು

ಉ) ಗುತ್ತಿಗೆದಾರರಿಗೆ ನೋಟೀಸ್ ನ್ನು ದಿನಾಂಕ 5–7–2006 ಮತ್ತು 8–12–2006ರಂದು ಜಾರಿ ಮಾಡಲಾಗಿದ್ದು, ರೂ 1 00 ಲಕ್ಷ ದಂಡವನ್ನು ಸಹ ವಿಧಿಸಲಾಗಿದೆ ಈ ಕಾಮಗಾರಿಗಳು ತೀವ್ರ ಪ್ರಗತಿಯಲ್ಲಿದೆ

ಊ) ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ಹಿಪ್ಪರಗಿ ಬ್ಯಾರೇಜಿನಲ್ಲಿ 5 90 ಸಾವಿರ ದಶಲಕ್ಷ ಘನ ಅಡಿ (TMCft) ನೀರು ಶೇಖರಣೆ ಇರುತ್ತದೆ ಆದುದರಿಂದ ಬೇಸಿಗೆಯಲ್ಲಿ ನೀರಿನ ತೊಂದೆ ಉದ್ಭವಿಸುವ ಸಾಧ್ಯತೆಗಳು ಇರುವುದಿಲ್ಲ

ಅನುಬಂಧ–ಅ

ಜಮಖಂಡಿ ಪಟ್ಟಣ

1977–78 ರಿಂದ 1979–80 ರವರೆಗೆ ಜಮಖಂಡಿ ಪಟ್ಟಣ ವ್ಯಾಪ್ತಿಯಲ್ಲಿ ಅಳವಡಿಸಿದ ವಿತರಣಾ ಕೊಳವೆ ಮಾರ್ಗದ ವಿವರಗಳು

1 200 ಮಿ ಮೀ ವ್ಯಾಸದ ಪಿ ವಿ ಸಿ –163 ಮೀಟರು
2 160 ಮಿ ಮೀ ವ್ಯಾಸದ ಪಿ ವಿ ಸಿ –1998 ಮೀಟರು
3 110 ಮಿ ಮೀ ವ್ಯಾಸದ ಪಿ ವಿ ಸಿ – 4592 ಮೀಟರು
4 90 ಮಿ ಮೀ ವ್ಯಾಸದ ಪಿ ವಿ ಸಿ –10242 ಮೀಟರು
5 80 ಮಿ ಮೀ ವ್ಯಾಸದ ಸಿ ಐ –15600 ಮೀಟರು
6 100 ಮಿ ಮೀ ವ್ಯಾನದ ಸಿ ಐ –1200 ಮೀಟರು
7 125 ಮಿ ಮೀ ವ್ಯಾಸದ ಸಿ ಐ –500 ಮೀಟರು
8 150 ಮಿ ಮೀ ವ್ಯಾಸದ ಸಿ ಐ –3200 ಮೀಟರು
9 200 ಮಿ ಮೀ ವ್ಯಾಸದ ಸಿ ಐ –1100 ಮೀಟರು
10 225 ಮಿ ಮೀ ವ್ಯಾಸದ ಸಿ ಐ – 2000 ಮೀಟರು

2000–2001ರಲ್ಲಿ ಜಮಖಂಡಿ ಪಟ್ಟಣ ವ್ಯಾಪ್ತಿಯಲ್ಲಿ ಮುಧೋಳ ರಸ್ತೆಯ ಗುಡ್ಡದ ಮೇಲಿರುವ ಆರ್ ಸಿ ಸಿ ಸಂಪ್ ನಿಂದ ದಾನಮ್ಮ ದೇವಸ್ಥಾನದವರೆಗೆ, ಕೋಹಿನೀರು ಗ್ಯಾರೇಜ್ ಹತ್ತಿರ ಪ್ರಭಾತ್ ನಗರದಲ್ಲಿ ಹಾಗೂ ಅಬುಬಕರ್ ದರ್ಗಾ ಹತ್ತಿರ ಅಳವಡಿಸಿದ ವಿತರಣಾ ಕೊಳವೆಗಳ ವಿವರ

1 200 ಮಿ ಮೀ ವ್ಯಾಸದ ಪಿ ವಿ ಸಿ –132 ಮೀಟರು
2 160 ಮಿ ಮೀ ವ್ಯಾಸದ ಪಿ ವಿ ಸಿ –1362 ಮೀಟರು
3 110 ಮಿ ಮೀ ವ್ಯಾಸದ ಪಿ ವಿ ಸಿ –2208 ಮೀಟರು
4 90 ಮಿ ಮೀ ವ್ಯಾಸದ ಪಿ ವಿ ಸಿ –3558 ಮೀಟರು

ಅನುಬಂಧ–ಆ

ರಬಕವಿ–ಬನಹಟ್ಟಿ ನಗರ

1996–97 ರಿಂದ 1999–2000ರಲ್ಲಿ ಪಟ್ಟಣ ವ್ಯಾಪ್ತಿಯಲ್ಲಿ ಅಶೋಕ ಕಾಲೋನಿ, ಬನಹಟ್ಟಿ ಹೊಸಭಾವಿ ಏರಿಯಾ, ಗುಂದನಕರ ಮತ್ತಿಕೆರೆ ಏರಿಯಾ, ಕೆ ಹೆಚ್ ಡಿ ಸಿ ಕಾಲೋನಿ, ಬನಹಟ್ಟಿ ಬಸವನಗರ, ಬನಹಟ್ಟಿ ಲಕ್ಷ್ಮೀ ಗುಡಿ ಏರಿಯಾ, ದರ್ಗಾ ರಸ್ತೆ, ಕೆ ಇ ಬಿ ಕಛೇರಿ ರಸ್ತೆ, ಇದಗಾ ಮೈದಾನ ರಸ್ತೆ, ದತ್ತಾತ್ರೆಯ ದೇವಸ್ಥಾನ ರಸ್ತೆ, ಬನಹಟ್ಟಿ ಪಿಲ್ಟರ್ ಹೌಸ್, ರಬಕವಿ ದುರಾದಬಾಬಿ, ಪಟ್ಟಣ ಹೈಸ್ಕೂಲ, ಗಣಪತಿ ದೇವಸ್ಥಾನ ರಸ್ತೆ ಮತ್ತು ಬನಹಟ್ಟಿ ಅಶೋಕ ನಗರದಲ್ಲಿ ಅಳವಡಿಸಿದ ವಿತರಣಾ ಕೊಳವೆ ಮಾರ್ಗದ ವಿವರಗಳು

1 250 ಮಿ ಮೀ ವ್ಯಾಸದ ಪಿ ವಿ ಸಿ –532 ಮೀಟರು
2 200 ಮಿ ಮೀ ವ್ಯಾಸದ ಪಿ ವಿ ಸಿ – 785 ಮೀಟರು
3 160 ಮಿ ಮೀ ವ್ಯಾಸದ ಪಿ ವಿ ಸಿ –1825 ಮೀಟರು
4 110 ಮಿ ಮೀ ವ್ಯಾಸದ ಪಿ ವಿ ಸಿ –5596 ಮೀಟರು
5 90 ಮಿ ಮೀ ವ್ಯಾಸದ ಪಿ ವಿ ಸಿ –20262 ಮೀಟರು

ಅನುಬಂಧ–ಇ

ತೇರದಾಳ ಪಟ್ಟಣ

1995–96 ರಲ್ಲಿ ಪಟ್ಟಣ ವ್ಯಾಪ್ತಿಯಲ್ಲಿ ಅಳವಡಿಸಿದ ವಿತರಣಾ ಕೊಳವೆ ಮಾರ್ಗದ ವಿವರಗಳು

1 250 ಮಿ ಮೀ ವ್ಯಾನದ ಪಿ ವಿ ಸಿ –1525 ಮೀಟರು
2 200 ಮಿ ಮೀ ವ್ಯಾನದ ಪಿ ವಿ ಸಿ –195 ಮೀಟರು
3 160 ಮಿ ಮೀ ವ್ಯಾನದ ಪಿ ವಿ ಸಿ – 796 ಮೀಟರು
4 110 ಮಿ ಮೀ ವ್ಯಾನದ ಪಿ ವಿ ಸಿ –1156 ಮೀಟರು
5 90 ಮಿ ಮೀ ವ್ಯಾನದ ಸಿ ಐ –6464 ಮೀಟರು

2005–2006ರಲ್ಲಿ ಪಟ್ಟಣ ವ್ಯಾಪ್ತಿಯಲ್ಲಿ ಅಳವಡಿಸಿದ ವಿತರಣಾ ಕೊಳವೆ ಮಾರ್ಗದ ವಿವರಗಳು

ದೇವರಾಜ ನಗರ

1 200 ಮಿ ಮೀ ವ್ಯಾಸದ ಡಿ ಐ 265 ಮೀಟರು
2 150 ಮಿ ಮೀ ವ್ಯಾಸದ ಡಿ ಐ 305 ಮೀಟರು
3 100 ಮಿ ಮೀ ವ್ಯಾನದ ಡಿ ಐ 1415 ಮೀಟರು
4 80 ಮಿ ಮೀ ವ್ಯಾಸದ ಡಿ ಐ 1188 ಮೀಟರು

440 (634) **ಶ್ರೀ ಸಿಂಧೂರ ಜೆ ರಾಜಶೇಖರ (ಶಿಗ್ಗಾಂವ್)** ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ಮತ್ತು ಸವಣೂರ ತಾಲ್ಲೂಕುಗಳಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯ ಗುತ್ತಿಗೆಯ ಟೆಂಡರ್ ಮೊತ್ತ ಎಷ್ಟು ಹಾಗು ಯಾವ ಸಂಸ್ಥೆಗೆ (ಗುತ್ತಿಗೆದಾರರು) ಗುತ್ತಿಗೆ ನೀಡಲಾಗಿದೆ,

ಆ) ಈ ಯೋಜನೆಯ ಕಾಮಗಾರಿ ಈಗ ಯಾವ ಹಂತದಲ್ಲಿದೆ (ಗ್ರಾಮವಾರು ಮಾಹಿತಿ ಒದಗಿಸುವುದು),